ಹರೀಶ್ ಎಸ್.

ಕಲರ್ಸ್ ಕನ್ನಡದ 'ಕನ್ನಡತಿ'ಯ ನಂಜುಂಡ

# ಜೀವಂತ ಕಲೆ ರಂಗಭೂಮಿ

◆ **ನಿಮ್ಮ ಬಣ್ಣದ ಲೋಕದ ಪಯಣವನ್ನು ಹೇಳಬಹುದಾ?**

ಬಣ್ಣಕ್ಕೂ ನನಗೂ ದಶಕಗಳ ಕಾಲದ ನಂಟಿದೆ. ಮೂಲತಃ ರಂಗಕರ್ಮಿ, ಟೀವಿಗೆ ಹತ್ತಾರು ವರ್ಷಗಳ ಹಿಂದೆ ಪ್ರವೇಶ ಮಾಡಿದೆ. 'ಶಾಂತಂಪಾಪಂ', 'ಮುಕ್ತ', 'ಮೀರಾ ಮಾಧವ ರಾಘವ', ಆರಂಭದ 'ಸಿಲ್ಲಿ ಲಲ್ಲಿ', 'ಪಾಪ ಪಾಂಡು'ವಿನಲ್ಲಿ ಕಾಣಿಸಿಕೊಂಡಿದ್ದೆ. ಇತ್ತೀಚೆಗೆ ಕಲರ್ಸ್ ಸೂಪರ್‌ನ 'ಶನಿ', 'ಮಹಾ ಕಾಳಿ', 'ಜೈಹನುಮಾನ್'ಗಳಲ್ಲಿ ಮುಖ್ಯಪಾತ್ರಗಳ ನಿರ್ವಹಣೆ ಮಾಡಿದ್ದೇನೆ. ಸಿನಿಮಾದಲ್ಲಿಯೂ ನಿಟಿಸುತ್ತಿದ್ದೇನೆ. 'ಗಿಫ್ಟ್‌ಬಾಕ್ಸ್' ಕೆಲ ದಿನಗಳ ಹಿಂದೆ ತೆರೆಕಂಡಿದೆ. 'ಕೆಜಿಎಫ್–2'ರಲ್ಲಿಯೂ ನಿರ್ವಹಿಸುತ್ತಿದ್ದೇನೆ.

◆ **ನಿಮ್ಮ ಬಹುಮುಖ ಅಭಿರುಚಿ ಬೆಳೆದಿದ್ದೂ ಹೇಗೆ?**

ಮೂಲತಃ ನಾವು ಮೈಸೂರಿನವರು. ಹುಟ್ಟಿದ್ದು– ಬೆಳೆದಿದ್ದು ಮೂವತ್ತು ವರ್ಷಗಳ ಕಾಲ ಶಿಕ್ಷಕನಾಗಿ ಕೆಲಸ ಮಾಡಿದ್ದೆಲ್ಲಾ ಮೈಸೂರಿನಲ್ಲಿಯೇ. ಈಗ ನಿವೃತ್ತನಾಗಿದ್ದೇನೆ. ನನ್ನ ತಂದೆ– ತಾಯಿ ಕೂಡ ಇಲ್ಲೇ ನೆಲೆಸಿದ್ದಾರೆ. ಹೇಗೋ ರಂಗಭೂಮಿಯ ನಂಟು ಬೆಳೆಯಿತು. ಅದನ್ನು ದುಡಿಸಿಕೊಂಡ ಪರಿಣಾಮ ಮೈಸೂರು ಆಕಾಶವಾಣಿಯಲ್ಲಿ ಬಿ ಗ್ರೇಡ್ ಕಲಾವಿದ ಆಗಲು ಸಾಧ್ಯವಾಯಿತು. ಅದರ ಜೊತೆ ಸ್ಥಳೀಯ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿಯೂ ಆ್ಯಂಕರ್ ಮಾಡುತ್ತಿದ್ದೆ. ಅನೇಕ ಸಂವಾದಗಳನ್ನು ನಡೆಸಿಕೊಟ್ಟಿದ್ದೇನೆ. ಶಾಲಾ ಅವಧಿ ಮುಗಿದ ನಂತರ ರಂಗಚಟುವಟಿಕೆ ಮಾಡುತ್ತಿದ್ದೆ. ಆಕಾಶವಾಣಿ ಕಲಾವಿದನಾಗಿ ರಾಷ್ಟ್ರೀಯ ನಾಟಕಗಳಲ್ಲಿ ತೊಡಗಿಸಿಕೊಂಡಿದ್ದೇನೆ. ಶಿಕ್ಷಣದಲ್ಲಿ ರಂಗಭೂಮಿ ಎಂಬ ಪರಿಕಲ್ಪನೆಯಲ್ಲಿ ಪಠ್ಯಗಳಿಗೆ ರಂಗರೂಪ ನೀಡುತ್ತಿದ್ದೆ. ಇದರ ನಡುವೆ ಮೈಸೂರಿನ ಪತ್ರಿಕೆಯೊಂದಕ್ಕೆ ಅಂಕಣವನ್ನೂ ಬರೆಯುತ್ತಿದ್ದೇನೆ.

ಧಾರಾವಾಹಿ– ಸಿನಿಮಾ ಎಂದು ಬಂದಿರುವ ಅವಕಾಶವನ್ನು ಉಪಯೋಗಿಸಿಕೊಂಡು ನನ್ನಲ್ಲಿ ಇರುವ ಕಲಾವಂತಿಕೆಯನ್ನು ಹೊರಹೊಮ್ಮಿಸಬೇಕು ಎನ್ನುವ ಆಸೆ ನನ್ನದು. ಏನೇ ಆದರೂ ಜೀವಂತ ಕಲೆ ರಂಗಭೂಮಿಯಲ್ಲೇ ನನ್ನ ಮನಸು ಮಿಂದೇಳುತ್ತದೆ. ಹಾಗಾಗಿ ಅದರತ್ತವೆ ಮನಸು ತುಡಿಯುತ್ತದೆ.

ಹಿಂದೂಸ್ತಾನಿ ಗಾಯಕ ಭೀಮಸೇನ್ ಜೋಷಿ ಅವರ ಆತ್ಮಕಥೆ ಆಧಾರಿತ ನಾಟಕವನ್ನು ನಿರ್ದೇಶನ ಮಾಡಿದ್ದೇನೆ. ಭೀಮಸೇನ್ ಜೋಷಿ ಅವರ ಮಗ ರಾಘವೇಂದ್ರ ಜೋಷಿ ಇತ್ತೀಚೆಗೆ ಅವರು ನಿಧನರಾಗಿದ್ದಾರೆ. ಅವರನ್ನೇ ಕೇಂದ್ರವಾಗಿಟ್ಟುಕೊಂಡು 'ಭೀಮಣ್ಣನ ಮಗ' ಎಂದು ನಾಟಕ ಆಡಿದೆವು.

◆ **ನಂಜುಂಡ ಪಾತ್ರ ನಿಮಗೆ ಏಕೆ ಇಷ್ಟ ಆಗುತ್ತದೆ?**

ಪ್ರಾಮಾಣಿಕವಾಗಿ ಹೇಳಬೇಕು ಎಂದರೆ ನಂಜುಂಡನ ಪಾತ್ರ ನನ್ನ ಮನದಾಳದ ಕೊರತೆಯನ್ನು ತುಂಬುತ್ತಿದೆ. ಏಕೆಂದರೆ, ನನಗೆ ಹೆಣ್ಣುಮಕ್ಕಳಿಲ್ಲ. ನಮ್ಮ ಕುಟುಂಬದಲ್ಲಿ ನನ್ನ ತಮ್ಮನಿಗೆ ಒಬ್ಬಳು ಮಗಳಿದ್ದಾರೆ. ಅವಳು ಡಿಗ್ರಿ ಓದುತ್ತಿದ್ದಾಳೆ. ನನಗೂ ಏಕಮಾತ್ರ ಪುತ್ರ. ಈ ಧಾರಾವಾಹಿಯಲ್ಲಿ ನಂಜುಂಡನಾಗಿ ಮೂರು ಹೆಣ್ಣುಮಕ್ಕಳ ತಂದೆ ಆಗುವ ಭಾಗ್ಯ ಸಿಕ್ಕಿದೆ. ನನ್ನ ಮೊದಲ ಪತ್ನಿ ಮಗಳು ಭುವಿ. ಮನೆ ಅಳಿಯನಾಗಿದ್ದೂ ಎರಡನೇ ಮದುವೆ ಆಗುತ್ತೇನೆ. ನಂತರ ಎರಡು ಹೆಣ್ಣುಮಕ್ಕಳು. ರಿಯಲ್ ಲೈಫಿನಲ್ಲಿ ಹೆಣ್ಣುಮಕ್ಕಳ ತಂದೆ ಆಗದಿದ್ದರೂ ರೀಲ್ ಲೈಫ್‌ನಲ್ಲಿ ಆ ಅವಕಾಶ ಸಿಕ್ಕಿದೆ. ಆ ಮೂಲಕ ಹೆಣ್ಣುಮಕ್ಕಳ ಭಾವನೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿದೆ. ಅವರ ಅನನ್ಯ ಪ್ರೀತಿ ಇಲ್ಲಿ ನನಗೆ ಸಿಕ್ಕಿದೆ. ಪ್ರೀತಿ– ಸಹನೆಯನ್ನು ನೀಡುವ ತಂದೆಯ ಪಾತ್ರವನ್ನು ಅನುಭವಿಸಿ ಅದಕ್ಕೆ ನ್ಯಾಯ ಒದಗಿಸುತ್ತಿದ್ದೇನೆ.

◆ **ರಂಗಭೂಮಿ ಮತ್ತು ಕುಟುಂಬದ ನಡುವೆ ಸಮಯದ ಸಂಘರ್ಷವನ್ನು ಹೇಗೆ ಹೊಂದಾಣಿಕೆ ಸಾಧ್ಯವಾಯಿತು?**

ಅದಕ್ಕೆ ನನ್ನ ಪತ್ನಿ ಮಹಾಲಕ್ಷ್ಮಿ ಎಚ್.ಜಿ ಕಾರಣ. ಅವರೂ ವೃತ್ತಿಯಿಂದ ಶಿಕ್ಷಕಿ. ಈಗ ಮುಖ್ಯಶಿಕ್ಷಕಿ ಆಗಿ ಕೆಲಸ ಮಾಡುತ್ತಿದ್ದಾರೆ. ಆರಂಭದಿಂದಲೂ ನಾನು ಸಮಯಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದೆ. ಸಮಯದ ಪ್ರಾಮುಖ್ಯತೆಯನ್ನು ಪಾಲಿಸಿದ್ದರಿಂದ ಅದು ಅಭ್ಯಾಸ ಆಯ್ತು. ನನ್ನ ಕುಟುಂಬದ ಜವಾಬ್ದಾರಿಗಳನ್ನು ನನ್ನ ಮಿತಿಯಲ್ಲಿ ಮಾಡುತ್ತಿದ್ದೆ. ಉಳಿದಂತೆ ನನ್ನ ಪತ್ನಿ ತಮ್ಮ ಉದ್ಯೋಗ ಹಾಗೂ ಕುಟುಂಬವನ್ನು ಸಮರ್ಪಕವಾಗಿ ನಿಭಾಯಿಸುತ್ತಿದ್ದರು. ರಂಗಭೂಮಿ ನನಗೆ ಶಿಸ್ತು ಮತ್ತು ಬದ್ಧತೆಯನ್ನು ಕಲಿಸಿತು. ಹಾಗಾಗಿ ಎಲ್ಲದನ್ನೂ ಕಲಿಯಲು ಸಾಧ್ಯವಾಯಿತು.



■ ರಾಘವೇಂದ್ರ ಕೆ.